ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು

**ಓ.ಎಸ್. ನಂ. 266/2022**
ಪಿ.ಡಬ್ಲೂ **-3**

ದಿಃ **20.07.2023** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ಮೋಹನಕುಮಾರ ಎನ್. ಎಂ. |
| ಗಂಡ/ತಂದೆಯ ಹೆಸರು | ಲೇಟ್ ಮುತ್ತಪ್ಪ ಎನ್.ಇ. |
| ವಯಸ್ಸು | ಸುಮಾರು **39** ವರ್ಷ |
| ಕೆಲಸ | ಬ್ಯಾಂಕ್ ವ್ಯವಸ್ಥಾಪಕ, ಬರೋಡಾ ಬ್ಯಾಂಕ್ |
| ವಾಸಸ್ಥಳ | ಮೈಸೂರು. |

**ಮುಖ್ಯ ವಿಚಾರಣೆ ವಾದಿ ಪರ ಶ್ರೀ ಕೆ.ವಿ.ವಿ. ವಕೀಲರಿಂದ**

ನಿಪಿ-1 ರಂತೆ ಚೆಕ್ ನ್ನು ಪ್ರತಿವಾದಿ, ವಾದಿಗೆ ನೀಡಿರುತ್ತಾರೆ. ಯಾವುದೇ ಚೆಕ್ ನ್ನು ಮಾನ್ಯ ಮಾಡಬೇಕಾದರೂ ಅಥವಾ ಅಮಾನ್ಯ ಮಾಡಬೇಕಾದರೂ ನಿಮ್ಮ ಗ್ರಾಹಕರ ಸಹಿಯನ್ನು ಪರಿಶೀಲಿಸಿ ಮಾಡುತ್ತೀರಿ ಎಂದರೆ ಸರಿ. ನಿಪಿ-1 ರಂತೆ ಚೆಕ್ ನ್ನು ಖಾತೆಯಲ್ಲಿ ಸಾಕಷ್ಟು ಇಲ್ಲ ಎಂಬ ಕಾರಣಕ್ಕಾಗಿ ನಿಪಿ-2 ರಂತೆ ಮೆಮೋ ನೀಡಲಾಗಿರುತ್ತದೆ.

**ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ ವಿ.ಕೆ. ವಕೀರರಿಂದ**

ನಿಪಿ-1 ರಂತೆ ಚೆಕ್ ವಿಜಯಾ ಬ್ಯಾಂಕ್ ಗೆ ಸಂಬಂಧಿಸಿದ್ದು ಎಂದರೆ ಸರಿ. ವಿಜಯಾ ಬ್ಯಾಂಕ್ ಮತ್ತು ಬ್ಯಾಂಕ್ ಆಫ್ ಬರೋಡ ಯಾವಾಗ ವಿಲೀನಗೊಂಡಿದೆ ಎಂದರೆ ಸಾಕ್ಷಿ 2019-20 ರಲ್ಲಿ ಆಗಿದ್ದು, ನಿಖರವಾದ ದಿನಾಂಕ ಗೊತ್ತಿಲ್ಲ ಎಂದು ಹೇಳುತ್ತಾರೆ. ನಾನು ಬ್ಯಾಂಕ್ ಆಫ್ ಬರೋಡದಲ್ಲಿ ವ್ಯವಸ್ಥಾಪಕನಾಗಿ ದಿಃ10.07.2023 ರಿಂದ ಕಾರ್ಯ ನಿರ್ಹಹಿಸುತ್ತಿದ್ದೇನೆ. ನಿಪಿ-1 ರಂತೆ ಚೆಕ್ ನಗದೀಕರಣಕ್ಕೆ ಯಾವಾಗ ನಿಮ್ಮ ಬ್ಯಾಂಕ್ ಗೆ ಬಂತು ಎಂದರೆ ಸಾಕ್ಷಿ ದಿಃ20.12.2019 ರಲ್ಲಿ ಎಂದು ಹೇಳುತ್ತಾರೆ. ನಿಪಿ-1 ರಂತೆ ಚೆಕ್ ನಗದೀಕರಣ ಆಗದೇ ವಾಪಸ್ಸು ಯಾವ ದಿನಾಂಕದಂದು ಮಾಡಲಾಗಿದೆ ಎಂದರೆ ಸಾಕ್ಷಿ ದಿಃ20.12.2019 ಎಂದು ಹೇಳುತ್ತಾರೆ. ಸಾಮಾನ್ಯವಾಗಿ ಚೆಕ್ ನ್ನು ನಗದೀಕರಣಕ್ಕಾಗಿ ಸಲ್ಲಿಸಿದಾಗ ಏನನ್ನು ಪರಿಶೀಲಿಸುತ್ತೀರಿ ಎಂದರೆ ಸಾಕ್ಷಿ ಮೊದಲು ಚೆಕ್ ದಿನಾಂಕ,

ಖಾತೆದಾರರ ಹೆಸರು, ಚೆಕ್ ನ ಮೇಲಿನ ಹಣ, ಚೆಕ್ ಮೇಲಿನ ಖಾತೆದಾರರ ಸಹಿ ಹಾಗೂ ಚೆಕ್ ಯಾವ ಬ್ಯಾಂಕ್ ದ್ದು ಎಂದು ಪರಿಶೀಲಿಸುತ್ತೇವೆ ಎಂದು ಹೇಳುತ್ತಾರೆ. ನಿಪಿ-1 ರಂತೆ ಚೆಕ್ ಮೇಲಿನ ಸಹಿಯನ್ನು ಬ್ಯಾಂಕಿನಲ್ಲಿರುವ ಮಾದರಿ ಸಹಿಯೊಂದಿಗೆ ತಾಳೆ ನೋಡಿ ಚೆಕ್ ನ್ನು ಮಾನ್ಯ ಅಥವಾ ಅಮಾನ್ಯ ಮಾಡುತ್ತೇವೆ ಎಂದು ಹೇಳುತ್ತಾರೆ. ಪ್ರತಿವಾದಿಗೆ ಮಾದರಿ ಸಹಿಯ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ನ್ಯಾಯಾಲಯ ಕೇಳಿದರೆ ಕೊಡುತ್ತೇನೆ ಎಂದು ಹೇಳುತ್ತಾರೆ. ನಿಪಿ-1 ರ ಮೇಲಿರುವ ಸಹಿ ಪ್ರತಿವಾದಿ ಸಹಿ ಅಲ್ಲ ಎಂದರೆ ಸಾಕ್ಷಿ ಮಾದರಿ ಸಹಿ ಹಾಗೂ ನಿಪಿ-1 ರಲ್ಲಿರುವ ಸಹಿ ತಾಳೆ ಇದೆ ಎಂದು ಹೇಳುತ್ತಾರೆ. ನಿಪಿ-1 ರಲ್ಲಿರುವ ಸಹಿ ಪ್ರತಿವಾದಿಯ ಸಹಿ ಅಲ್ಲದೇ ಇದ್ದರೂ, ವಾದಿಯೊಂದಿಗೆ ಶಾಮಿಲಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.
ಓ ಹೇ ಕೇ ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು